ತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—Order, order.

Interim arrangements to look after the functions of the dissolved Panchayats.

*Q.—24. Sri T. TARE GOWDA (Sira).—

Will the Government be pleased to state :—

(*a*) whether it is a fact that the village panchayats with a population of 500 and less are abolished in Mysore State from 1st November 1959;

(*b*) if so, who will look after the office correspondence and obligatory and legitimate duties and functions of such panchayats in the interim period till new panchayats are constituted ?

*A.—Sri T. SUBRAMANYA (Minister for Law, Labour and Local Self-Government).—

(*a*) The village panchayats with a population of less than 1,500 stand dissolved with effect from 1st November, 1959.

(*b*) The Tahsildars have been authorised to look after the work that was previously carried on by such dissolved Panchayats, until new Panchayats are constituted under the Mysore Village Panchayats and Local Boards Act, 1959.

ಶ್ರೀ ಟಿ. ತಾರೇಗೌಡ.—(ಬ) ಪ್ರಶ್ನೆಗೆ ಉತ್ತರವಾಗಿ ರದ್ದುಗೊಳಿಸಲಾದ ಪಂಚಾಯತಿಗಳು ನೆರವೇರಿಸುತ್ತಿದ್ದ ಕಾರ್ಯವನ್ನು ನೋಡಿಕೊಳ್ಳಲು ತಹಸೀಲ್‌ದಾರರಿಗೆ ಅಧಿಕಾರ ಕೊಡಲಾಗಿದೆ ಎಂದು ಹೇಳಿದ್ದೀರಿ. ಆದರೆ 50—60 ಹಳ್ಳಿಗಳಿರತಕ್ಕ ತಾಲ್ಲೂಕ್‌ಗಳಲ್ಲಿ ಇನ್ನಾರಾದರೂ ವಿಲೇಜ್ ಆಫೀಸರುಗಳು ಆ ಕಾರ್ಯಗಳನ್ನು ನಿರ್ವಹಿಸಬೇಕೆಂದು ನೂಚನೆ ಕೊಟ್ಟಿದ್ದೀರಾ ?

†ಶ್ರೀ ಟಿ ಸುಬ್ರಹ್ಮಣ್ಯ.—ಕೊಟ್ಟಿಲ್ಲ. ಟೆಂಪೊರರಿ ಪೀರಿಯಡ್ಡಿನಲ್ಲಿ ಅವರೇ ಆ ಚಾರ್ಜಿನಲ್ಲಿರಬೇಕೆಂದು ಹೇಳಿದೆ.

ಶ್ರೀ ಟಿ. ತಾರೇಗೌಡ.—ಈ ದಿವಸ 'ಪ್ರಜಾವಾಣಿ' ಪತ್ರಿಕೆಯಲ್ಲಿ ವಿಲೇಜ್ ಆಫೀಸರುಗಳು ತಹಸೀಲ್‌ದಾರರ ಮುಖಾಂತರ ಪಂಚಾಯತಿಗಳ ಕೆಲಸಕಾರ್ಯಗಳನ್ನು ನಿರ್ವಹಿಸಬೇಕೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ವಿಲೇಜ್ ಆಫೀಸರುಗಳು ಶೇಕ್‌ದಾರನ ಮುಖೇನ ಕೆಲಸ ಮಾಡಬೇಕೆಂದು ಹೇಳಿದೆ. ಅವರ ಕೆಲಸಗಳ ಮೇಲೆ ಹತೋಟಿ ಇರತಕ್ಕದ್ದು ಅಮಲ್ದಾರರಿಗೆ ಮಾತ್ರ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ—ರದ್ದುಗೊಳಿಸಲಾದ ಪಂಚಾಯತಿಗಳು ಮಂಜೂರು ಮಾಡಿದ್ದ ಎಸ್ಟಿಮೇಟುಗಳ ಪ್ರಕಾರ ಆ ಎಲ್ಲಾ ಕೆಲಸಕಾರ್ಯಗಳನ್ನೆಲ್ಲಾ ನೆರವೇರಿಸುವುದಕ್ಕೆ ಈಗಿನ ತಹಶೀಲಬಾರರಿಗೆ ಅಧಿಕಾರ ಕೊಡಲಾಗಿದೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ರದ್ದುಗೊಳಿಸಲಾದ ಪಂಚಾಯತಿಗಳು ಹಿಂದೆ ಯಾವ ಯಾವ ಎಸ್ಟಿಮೇಟುಗಳನ್ನು ಮಂಜೂರು ಮಾಡಿದ್ದುವೋ ಆ ಎಸ್ಟಿಮೇಟುಗಳ ಪ್ರಕಾರ ಎಲ್ಲಾ ಕೆಲಸಗಳನ್ನೂ ನಿರ್ವಹಿಸಬೇಕು, ಯಾವ ಕೆಲಸವನ್ನೂ ನಿಲ್ಲಿಸಕೂಡದು ಎಂದು ಹೇಳಿದ್ದೇವೆ. ಮತ್ತು ಹೊಸ ಕೆಲಸ ತೆಗೆದುಕೊಳ್ಳಕೂಡದು ಎಂದೂ ಹೇಳಿದ್ದೇವೆ.

Sri G. VENKATAI GOWDA.—Is the Government contemplating the constitution of panchayats even in the villages having a population of less than 1,500 ?

Sri T. SUBRAMANYA.—Yes. It is left to the discretion of the Government to declare such villages as "village panchayats" for special reasons.

Sri G. VENKATAI GOWDA.—Does the Government coutemplate that by this process all the villages in the State would be covered by panchayats ?

Sri T. SUBRAMANYA.—I expect that to happen.

Sri J. B. MALLARADHYA.—What is the additional staff sanctioned to the several taluk offices to look after the work of the village panchayats ?

Sri T. SUBRAMANYA.—According to me there is sufficient staff in the taluk offices themselves and in addition the staff of the District Boards would be allocated.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮೊದಲು ವಿಲೇಜ್ ಪಂಚಾಯತಿಗಳ ಕೆಲಸ ಕಾರ್ಯಗಳನ್ನು ನೋಡತಕ್ಕ ಸಿಬ್ಬಂದಿ ಇತ್ತು. ಈಗ ರದ್ದುಗೊಳಿಸಲಾದ ಪಂಚಾಯತಿಗಳ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ಹೊಸದಾಗಿ ಹೆಚ್ಚಿನ ಸಿಬ್ಬಂದಿಯನ್ನೇನಾದರೂ ತಹಸೀಲ್‌ದಾರರಿಗೆ ಕೊಟ್ಟಿದ್ದೀರಾ ?

ಶ್ರೀ ಟಿ. ಸುಬ್ರಹ್ಮಣ್ಯ.—ಏನೂ ಕೊಟ್ಟಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹಾಗಾದರೆ ಅವರು ಹೇಗೆ ಕೆಲಸ ಮಾಡುವುದು ?

ಶ್ರೀ ಟಿ. ಸುಬ್ರಹ್ಮಣ್ಯ.—ಮೊದಲು ಹೇಗೆ ಮಾಡುತ್ತಿದ್ದರೋ ಹಾಗೆಯೇ ಮಾಡುವುದು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹಾಗಾದರೆ ದೇವರೇ ಗತಿ !

ಶ್ರೀ ಟಿ. ಸುಬ್ರಹ್ಮಣ್ಯ.—ದೇವರೇ ಗತಿಯಲ್ಲ; ಈ ಕಾನೂನು ಹೊಸ ಪಂಚಾಯತಿಗಳು ರಚಿಸಲ್ಪಡುವವರೆಗೆ ಜಾರಿಯಲ್ಲಿರತಕ್ಕದ್ದು; ಆದುದರಿಂದ ಅದುವರೆಗೆ ಹಳ್ಳಿಯವರಿಗೆ ಹಳ್ಳಿಯವರೇ ಗತಿಯಾಗಬೇಕು.